# ಅತಿಯಾಸೆಯ ಫಲ

ಮೂಲ ಹಿಂದೀ: **ಸ್ವಾಮಿ ಜಪಾನಂದ**

ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

**ಸಿಂ**ಧ್ ಪ್ರದೇಶದಲ್ಲಿ ಕರಾಚಿ ಒಂದು ದೊಡ್ಡ ಬಂದರಾಗಿದೆ. ನಗರವೂ ಚೆನ್ನಾಗಿದೆ, ಜೊತೆಗೆ ಬಹಳಷ್ಟು ಧನಿಕರೂ ವಾಸಿಸುವ ಸ್ಥಳ ಅದು. ಸಂನ್ಯಾಸಿಯು ಪಂಜಾಬನ್ನು ಸುತ್ತುತ್ತ ಸಿಂಧುವಿನ ಹೈದರಾಬಾದ್ ನಗರ ಮತ್ತು ಅಲ್ಲಿಂದ ಕರಾಚಿಯನ್ನು ತಲುಪಿದ. ಅಲ್ಲಿ ಮೊದಲಿಗೆ ಸಾಧುಬೇಲಾ ಆಶ್ರಮದಲ್ಲಿ ಕೆಲವು ದಿನ ತಂಗಿದ್ದ ಮತ್ತು ನಂತರ ಬಂದರ್ ರಸ್ತೆಯ ಬಡಾವಣೆಯಲ್ಲಿ ಒಂದು ಹೈದ್ರಾಬಾದೀ ಬಟ್ಟೆ ವ್ಯಾಪಾರಿಯ ಸೌಜನ್ಯಕ್ಕೆ ಕಟ್ಟುಬಿದ್ದು, ಅವನ ಹೊಸ ಮನೆಯಲ್ಲಿ ತಂಗಿದ. ಅಲ್ಲಿ ಆ ಸಮಯದಲ್ಲಿ ಹಿಂದೂಗಳ ಮನೆಗಳು ಕೇವಲ ಮೂರೇ ಇದ್ದವು ಮತ್ತು ಇನ್ನೂ ಕೆಲವು ನಿರ್ಮಾಣವಾಗುತ್ತಿದ್ದವು. ಅಲ್ಲಿ ಪಾರ್ಸಿ ಕಾಲೋನಿ ತಯಾರಾಗಿಬಿಟ್ಟಿತ್ತು.

ಕರಾಚಿಯಲ್ಲಿ ಸಂನ್ಯಾಸಿಗೆ ಕೆಲವು ಸಿಂಧ್ ಸತ್ಸಂಗಿಗಳ ಪರಿಚಯವಾಯಿತು. ಅವರಲ್ಲಿ ಮೂರ್ನಾಲ್ಕು ಜನ ನಿಯಮಿತವಾಗಿ ಅವನನ್ನು ಭೇಟಿಯಾಗುತ್ತಿದ್ದರು. ಇವರೆಲ್ಲ ವೇದಾಂತಿಗಳಾಗಿದ್ದರು ಮತ್ತು ವಿಶೇಷವಾಗಿ 'ವಿಚಾರ-ಸಾಗರ'ದ ಅಭ್ಯಾಸಿಗಳೂ ಆಗಿದ್ದರು. ಈ ಸತ್ಸಂಗದಲ್ಲಿ ಬಹಳ ಆನಂದವೂ ಸಿಗುತ್ತಿತ್ತು.

ಅದರಲ್ಲಿ ಒಬ್ಬ, 'ವಿಚಾರ-ಸಾಗರ'ದ ವಿಶೇಷ ಅಭ್ಯಾಸಿಯಾಗಿದ್ದವನು, ಸಂನ್ಯಾಸಿಯನ್ನು ಏಕಾಂತದಲ್ಲಿ ಭೇಟಿಯಾಗಿ ಹೇಳಿದ : ''ಮಹಾಸ್ವಾಮಿ, ಈಗ ತಾನೇ ಒಬ್ಬ ಫಕೀರ ಬಂದಿದ್ದಾನೆ. ಅವನು ಚಿನ್ನ ತಯಾರಿಸಲು ಕಲಿತಿದ್ದಾನೆ. ತಾಮ್ರದಿಂದ ಚಿನ್ನವನ್ನು ಮಾಡುತ್ತಾನೆ. ಕೆಲವು ಗಿಡಮೂಲಿಕೆಗಳಿವೆ, ಅವುಗಳ ರಸವನ್ನು ತಾಮ್ರದಲ್ಲಿ ಬೆರಸಿ ಭಟ್ಟಿ ಇಳಿಸಿದಾಗ ಅದು ಚಿನ್ನವಾಗುತ್ತದೆ'' ಎಂದ.

ಸಂನ್ಯಾಸಿಯು ಹೇಳಿದ: ''ಅರೆ, ಅದರಲ್ಲಿ ನಂಬಿಕೆ ಇಡಬೇಡ. ಅದರಲ್ಲಿ ಹೆಚ್ಚಿನಂಶ ಮೋಸಗಾರರಿರುತ್ತಾರೆ. ನೀನು ಅದರಲ್ಲಿ ಸಿಕ್ಕಿಕೊಳ್ಳಬೇಡ. ಆ ಫಕೀರನಿಗೆ ಚಿನ್ನ ಮಾಡುವುದು ನಿಜವಾಗಿಯೂ ಗೊತ್ತಿದ್ದರೆ, ಅವನ್ಯಾಕೆ ಭಿಕ್ಷುಕನಂತೆ ಭಿಕ್ಷೆ ಬೇಡುತ್ತ ತಿರುಗುತ್ತಿದ್ದ? ಈ ತರದ ಮನುಷ್ಯರಿಂದ ದೂರವಿರೋ ತಮ್ಮಾ..'' ಎಂದ.

''ಆದರೆ ಸ್ವಾಮೀಜಿ, ಅವನು ನಮ್ಮ ಎದುರಲ್ಲೇ ಚಿನ್ನ ತಯಾರಿಸಿ ತೋರಿಸುತ್ತಾನೆ. ಮೊದಲಂತೂ ಯೋಗಿಗಳು ರಸವಿದ್ಯೆಯನ್ನು ಕಲಿತಿದ್ದರು. ಈಗಲೂ ರಸವಿದ್ಯೆಯಲ್ಲಿ ನಿಪುಣರಾದವರು ಸುಮಾರು ಜನ ಇದ್ದಾರೆ.''

''ಇರಬಹುದು, ಆದರೆ ಹೆಚ್ಚಿನಂಶ ಮೋಸಗಾರರೇ ಇರುತ್ತಾರೆ. ಜನರಿಗೆ ಮೋಸ ಮಾಡಿ ಓಡಿ ಹೋಗುತ್ತಾರೆ. ಹಾಗಾಗಿ ಈ



ಸಾಧು ಫಕೀರರಿಂದ ದೂರವಿರು.''

ಆ ಸಿಂಧೀ ಭಕ್ತ ಹೊರಟುಹೋದ, ಕೆಲವು ದಿನಗಳವರೆಗೆ ಭೇಟಿಯಾಗಲೂ ಇಲ್ಲ. ಯಾವುದೋ ಕಾರ್ಯದಲ್ಲಿ ಅವನು ಮಗ್ನನಾಗಿರಬಹುದು ಅಥವಾ ಆರೋಗ್ಯದಲ್ಲಿ ಏರುಪೇರು ಆಗಿರಬಹುದು ಎಂದು ಸಂನ್ಯಾಸಿಯು ಅಂದಾಜಿಸಿದ. ಅವರ ಮಿತ್ರನೊಬ್ಬ ಒಂದು ದಿನ ಸಂನ್ಯಾಸಿಯನ್ನು ಭೇಟಿಯಾದ ಮತ್ತು ಹೇಳಿದ, ''ನಿಮಗೆ ತಿಳಿದಿರಬಹುದು, ಆ ವ್ಯಕ್ತಿ ಹುಚ್ಚನಾಗಿದ್ದಾನೆ. ಅವನಿಗೆ ಯಾವನೋ ಫಕೀರ ಸಿಕ್ಕಿದ್ದು, ಚಿನ್ನವನ್ನು ಮಾಡುತ್ತೇನೆಂದು ಆಸೆ ತೋರಿಸಿ, ಅವನ ಮನೆಯಲ್ಲೇ ಭಟ್ಟಿಯನ್ನು ಹಾಕಿದ್ದ. ಅವನ ಹೆಂಡತಿಯ ಚಿನ್ನದ ಆಭರಣ ಎಷ್ಟಿದ್ದವೋ, ಅದನ್ನೆಲ್ಲ ತೆಗೆದುಕೊಂಡು ತಾಮ್ರದೊಂದಿಗೆ ಭಟ್ಟಿಯಲ್ಲಿ ಹಾಕಿ ಚಿನ್ನವನ್ನು ದುಪ್ಪಟ್ಟು ಮಾಡುತ್ತಿದ್ದ. ಐದಾರು ದಿನಗಳವರೆಗೆ ಭಟ್ಟಿಯ ಕೆಲಸ ನಡೆಯುತ್ತಿತ್ತು. ಅಷ್ಟರಲ್ಲಿ ಆ ಫಕೀರ ಮಾಯವಾಗಿಬಿಟ್ಟಿದ್ದ. ಆಗ ಇವನು ಭಟ್ಟಿಯಲ್ಲಿನ ಪಾತ್ರೆಯನ್ನು ತೆಗೆದು ನೋಡಿದಾಗ ಅದರೊಳಗೆ ಕಲ್ಲು ಮತ್ತು ತಾಮ್ರದ ತುಂಡುಗಳು ಇದ್ದವು, ಚಿನ್ನ ಮಾಯವಾಗಿತ್ತು. ಕಳ್ಳತನದ ಅರಿವಾಗುತ್ತಲೇ ಮನೆಯಲ್ಲಿ ಜಗಳ ಪ್ರಾರಂಭವಾಯಿತು. ಸಣ್ಣ ಸಣ್ಣ ಮಕ್ಕಳಿದ್ದಾರೆ, ವ್ಯಾಪಾರದಲ್ಲಂತೂ ನಷ್ಟ ವಾಗುತ್ತಲೇ ಇದೆ. ಅದರ ಮೇಲೆ, ಸರಿಸುಮಾರು ೭೦೦೦ದಷ್ಟು ಸಾಲವಿದೆ ಮತ್ತು ಮೂರೂವರೆ ಸಾವಿರದಷ್ಟು ಚಿನ್ನವನ್ನು ಎತ್ತಿ ಕೊಂಡು ಆ ರಸವಿದ್ಯೆಯ ಫಕೀರ ಪಲಾಯನ ಮಾಡಿದ್ದ. ಮನೆಯ ಪರಿಸ್ಥಿತಿ

ಯಂತೂ ಶೋಚನೀಯವಾಗಿಬಿಟ್ಟಿದೆ. ಈಗ ಅವನ ಜೀವನ ಹೇಗೆ ಎಂಬುದೇ ದೊಡ್ಡ ಸಮಸ್ಯೆಯಾಗಿದೆ!''

ಇದರಿಂದ ಆ ಸಿಂಧ್ ಭಕ್ತನು ಚಿಂತಾಗ್ರಸ್ತನಾಗಿದ್ದಾನೆ, ಮನೆ ಮತ್ತು ಹೊರಗಡೆ ಅವಮಾನಿತನಾಗಿ ಹುಚ್ಚನಂತಾಗಿಬಿಟ್ಟ. ಮನೆಯಿಂದ ಅವನ ಹೆಂಡತಿ, ಮಕ್ಕಳು ಹೊರಗೆ ಹಾಕಿದ್ದಾರೆ. ಹಾಗಾಗಿ ಅಲ್ಲಲ್ಲಿ ಅಲೆದಾಡುತ್ತ ಇದ್ದಾನೆ. ಪರಿಚಿತರು ಯಾರಾದರೂ ಒತ್ತಾಯದಿಂದ ರೊಟ್ಟಿಯನ್ನು ಕೊಟ್ಟಾಗ ತಿನ್ನುತ್ತಾನೆ. ಈ ಕಥೆಯನ್ನು ಕೇಳಿ ಸಂನ್ಯಾಸಿಗೆ ಬಹಳ ದುಃಖವಾಯಿತು. ಎಚ್ಚರಿಕೆ ಕೊಟ್ಟ ಮೇಲೂ, ದುರಾಸೆಯಿಂದ ಅವನು ಕೆಲಸ ಮಾಡಿಬಿಟ್ಟಿದ್ದ. ಕೆಟ್ಟ ಪ್ರಾರಬ್ಧ ಕರ್ಮವು ಅವನನ್ನು ಈ ರೀತಿ ಪ್ರೇರೇಪಿಸಿತ್ತು. ಈಗೇನು ಮಾಡಲು ಸಾಧ್ಯ ? ಮಾನಸಿಕ ಕ್ಲೇಶವೇ ಈ ಉನ್ಮಾದಕ್ಕೆ ಕಾರಣ. ಒಂದು ವೇಳೆ ಅದನ್ನು ತೊಲಗಿಸಿದರೆ ಬಹುಶಃ ಒಳ್ಳೆಯದಾಗುತ್ತದೋ ಏನೋ!

ಸಂನ್ಯಾಸಿಯು ಯಾವ ಸಜ್ಜನನ (ಶ್ರೀ ಗುರುನಾಮಲ್) ಮನೆಯಲ್ಲಿ ಅತಿಥಿಯಾಗಿದ್ದನೋ, ಅವರ ಮಗ ಸಂನ್ಯಾಸಿಯೊಂದಿಗೆ ಹೆಚ್ಚಿನ ಸಂಪರ್ಕ ಇಟ್ಟುಕೊಂಡಿದ್ದ. ಅವನು ಉದಾರ ಹೃದಯಿಯೂ ಆಗಿದ್ದ. ಅವನೊಂದಿಗೆ ವಿಚಾರಿಸಿದಾಗ ತಿಳಿಯಿತು, ಬಟ್ಟೆಯ ವ್ಯಾಪಾರಿ ಬಳಿಯೇ ಅವನಿಗೆ ಏಳು ಸಾವಿರದಷ್ಟು ಸಾಲ ಇದೆ ಎಂದು. ಮಾಲನ್ನು ತೆಗೆದುಕೊಂಡಿದ್ದ, ಆದರೆ ದುಡ್ಡು ಕೊಟ್ಟಿರಲಿಲ್ಲ. ಹಾಗಾಗಿ ಅವನ ಕಡೆಯಿಂದ ಉದಾರವಾಗಿ ಮಾಲನ್ನು ತೆಗೆದುಕೊಳ್ಳುವುದು ನಿಂತುಹೋಗಿತ್ತು. ಇದರಿಂದ ಪರಿಸ್ಥಿತಿ ಇನ್ನೂ ಹದಗೆಟ್ಟಿತು.

ಸಂನ್ಯಾಸಿ ಹೇಳಿದ : ''ಆದರೆ ತಮ್ಮಾ, ಇವನನ್ನು ರಕ್ಷಿಸಲೇಬೇಕು. ಅವನು ದುಃಖದಿಂದ ಹುಚ್ಚನಂತಾಗಿದ್ದಾನೆ, ಅವನ ಬದುಕು ಪಾಪ ಹಾಳಾಗಿ ಹೋಗಿದೆ. ಇದು ಸರಿಯಲ್ಲ. ಅವನು ನಿನ್ನ ಬಂಧುವೇ ಆಗಿದ್ದಾನಲ್ಲ, ಅವನ ಮೇಲೆ ನೀನು ಸ್ವಲ್ಪ ಉದಾರತೆಯನ್ನು ತೋರಿಸು. ಈಶ್ವರನ ಕೃಪೆಯಿಂದ ನೀನು ದುಡ್ಡು ಕಾಸಿನ ವಿಷಯದಲ್ಲಿ ಅದೃಷ್ಟವಂತ. ಐದು ಹತ್ತು ಸಾವಿರ ರೂಪಾಯಿಗಳು ನಿನಗೇನೂ ಕಷ್ಟವಲ್ಲ.''

''ನಾವೇನು ಮಾಡಲಾಗುತ್ತದೆ ಸ್ವಾಮೀಜಿ? ನಮ್ಮದೇ ಜಾಸ್ತಿ ಹಣವಿದೆ ಅವನಲ್ಲಿ – ಅರ್ಧಕ್ಕಿಂತಲೂ ಹೆಚ್ಚು. ಆದರೆ ಅದಕ್ಕಿಂತಲೂ ಮೀರಿ ಬಿಡಲಾಗುವುದಿಲ್ಲ!''

''ನಾನು ಬಿಡಬೇಕೆಂದು ಹೇಳುತ್ತಿಲ್ಲ. ನಾನು ಹೇಳುತ್ತಿರುವುದು ನೀನೋ ಅಥವಾ ಇನ್ನೊಬ್ಬನೋ, ಅವನಿಗೊಂದು ಷರತ್ತು ಹಾಕಿ, ಅವನ ಅಂಗಡಿಯನ್ನು ಅವನ ದುಡ್ಡು ವಸೂಲಿ ಆಗುವವರೆಗೂ ಸಂಭಾಳಿಸುತ್ತೀರಿ ಎಂದು. ಅವನ ಅಂಗಡಿಯನ್ನು ನಿಮ್ಮ ಹಿಡಿತದಲ್ಲಿಟ್ಟುಕೊಳ್ಳಿ, ಪೈಸೆ ವಸೂಲಿ ಆದ ಕೂಡಲೇ ಅವನಿಗೆ ಅಂಗಡಿಯನ್ನು ವಾಪಸ್ ಮಾಡಿ. ಇದರಿಂದ ಅವನಿಗೆ ಆದಾಯದ ಮಾರ್ಗ ಮುಚ್ಚಿಹೋಗುವುದಿಲ್ಲ. ಅವನ ಮನೆ ಖರ್ಚಿಗೆ ಎಷ್ಟು ಬೇಕೋ, ತಿಂಗಳಿಗೆ ಅಷ್ಟು ದುಡ್ಡನ್ನು, ಅಂಗಡಿಯ ಕಡೆಯಿಂದ ಕೊಡುವುದು. ಅದೂ ಅವನ ಹೆಂಡತಿಯ ಕೈಗೇ ಕೊಡಬೇಕು. ಅವನು ಅಂಗಡಿಯ ಹತ್ತಿರ ಬಂದರೆ, ಅವನಿಗೆ ಏನಾದರೂ ಕೆಲಸ ಮಾಡಲು ಹೇಳಿ. ಅವನ ದೊಡ್ಡ ಮಗನನ್ನು (ಸುಮಾರು ೧೧–೧೨ ವರ್ಷದವನು) ಅಂಗಡಿಯಲ್ಲಿ ಕೂರಿಸಿಕೊಳ್ಳಿ. ನನಗನ್ನಿಸುತ್ತದೆ ಇದರಿಂದ ಅವನ ಬುದ್ಧಿ ಸರಿಯಾಗುತ್ತದೆ ಎಂದು. ಹೀಗೆ ಮಾಡಲು ಸಾಧ್ಯ ತಾನೆ?''

ಅವನು ಹೇಳಿದ : ''ದೊಡ್ಡ ಅಣ್ಣ ಮತ್ತು ಇತರರೊಂದಿಗೆ ಮಾತಾಡುತ್ತೇನೆ. ಈ ರೀತಿಯ ವ್ಯವಸ್ಥೆಯಂತೂ ಮಾಡಬಹುದು.'' (ಅವನ ತಂದೆ ಆ ಸಮಯದಲ್ಲಿ ಹೈದರಾಬಾದ್‌ನಲ್ಲಿ ಇದ್ದರು, ಹೆಚ್ಚಿನ ಸಮಯ ಅಲ್ಲೇ ಇರುತ್ತಿದ್ದರು.)

೩–೪ ದಿನಗಳಲ್ಲಿ ಈ ವಿಷಯ ಇತ್ಯರ್ಥವಾಯಿತು. ದುಡ್ಡು ಕೊಟ್ಟವರೆಲ್ಲರೂ ನೆಂಟರೇ ಆಗಿದ್ದರು. ಆ ವ್ಯಕ್ತಿಯ ಧಾರ್ಮಿಕ ಭಾವನೆಯನ್ನು ನೋಡಿ ಅವನಲ್ಲಿ ಶ್ರದ್ಧಾಪ್ರೀತಿಯನ್ನು ಇಟ್ಟುಕೊಂಡಿದ್ದರು. ಅವನ ಈ ಪರಿಸ್ಥಿತಿಯ ಬಗ್ಗೆ ಎಲ್ಲರಿಗೂ ದುಃಖವಾಗಿತ್ತು. ಈಗ ಎಲ್ಲರೂ ಒಮ್ಮತಕ್ಕೆ ಬಂದರು. ಸಂನ್ಯಾಸಿಯು ಹೇಗೆ ಹೇಳಿದ್ದನೋ ಹಾಗೆಯೇ, ಅವನ ಪತ್ನಿಯ ಜೊತೆಯಲ್ಲಿ ನಿಗದಿಯಾದ ಷರತ್ತಿನಂತೆ ಅಂಗಡಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ವ್ಯಾಪಾರ ಶುರುವಾಯಿತು, ಇದರಿಂದ ಅವರಿಗೆ ಯಾವುದೇ ಕಷ್ಟವಾಗಲಿಲ್ಲ. ಆ ಬಂಧುಗಳು ಅಂಗಡಿಯ ಮೂಲಕ ಸ್ವಲ್ಪ ವಹಿವಾಟು ನಡೆಸಿ ದುಡ್ಡು ವಸೂಲಿ ಮಾಡಲು ನಿಶ್ಚಯಿಸಿದರು.

ಈ ವ್ಯವಸ್ಥೆ ಆದ ಮೇಲೆ ಆ ಸಿಂಧೀ ಭಕ್ತನ ಆರೋಗ್ಯ ಸುಧಾರಿಸಿತು. ಒಬ್ಬ ಹಳೆಯ ಮಿತ್ರನೊಂದಿಗೆ ಅವನು ಸಂನ್ಯಾಸಿಯನ್ನು ಭೇಟಿಯಾಗಲು ಬಂದಾಗ, ಇದ್ದಕ್ಕಿದ್ದಂತೆ ಸಂನ್ಯಾಸಿಯ ಕಾಲುಹಿಡಿದು ಜೋರಾಗಿ ಅಳಲು ಪ್ರಾರಂಭಿಸಿದ. ''ನೀವು ನನಗೆ ಬೇಡ ಎಂದಿದ್ದಿರಿ, ಆದರೆ ಅತಿಯಾದ ಆಸೆಯಿಂದ ನಾನು ಅದನ್ನು ಕೇಳಲಿಲ್ಲ, ಅದರ ಪರಿಣಾಮ ಹೀಗೆ ಕೆಟ್ಟದಾಗಿ ಆಯಿತು.''

''ಇರಲಿ, ಏನು ಆಗಬೇಕಿತ್ತೋ ಅದು ಆಯಿತು. ಈಗ ಸಾವಧಾನದಿಂದ ಕೆಲಸ ಮಾಡು. ನಿನ್ನ ಹೆಂಡತಿಯೊಂದಿಗ ಜಗಳ ಮಾಡಬೇಡ. ಅವಳು ಮನೆಯಿಂದಲೇ ನಿನ್ನನ್ನು ಆಚೆಗೆ ಹಾಕಿದ್ದಳು. ಆ ವಿಷಯದಲ್ಲಿ ಅವಳೊಂದಿಗೋ ಅಥವಾ ಬೇರೆ ಯಾರ ಜೊತೆಯಲ್ಲೋ ಚರ್ಚೆ ಮಾಡಬೇಡ. ಏನೂ ಆಗಿಯೇ ಇಲ್ಲವೆನ್ನುವಂತೆ ವರ್ತಿಸು. ನೀನಂತೂ ಪಕ್ಕಾ ವೇದಾಂತಿ ಅಲ್ಲವೇ, ಮತ್ತೇನು?''

ಅವನು ತಲೆ ತಗ್ಗಿಸಿ ಮೌನವಾಗಿ ಕುಳಿತಿದ್ದ.

ವ್ಯಾಪಾರಿಗಳ ಈ ಉದಾರತೆಯಲ್ಲಿತ್ತು ಮಾನವತೆಯ ಉದಾರ ಸ್ಪರ್ಶ, ಅನುಭೂತಿ!